**ದಿನಾಂಕಃ 31-03-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು**

**ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎನ್ ಎಸ್ ಬಿ ವಕೀಲರಿಂದ**

3. ನಾನು ವಿಚಾರಣಾಧಿಕಾರಿಯಾಗಿ ನೇಮಕ ಆದ ಬಗ್ಗೆ ಲಿಖಿತ ಆದೇಶ ನೀಡಿರುತ್ತಾರೆ . ಅದನ್ನು ನಾನು ವಿಚಾರಣಾ ನಡಾವಳಿಯಲ್ಲಿ ಉಲ್ಲೇಖಿಸಿಕೊಂಡಿದ್ದೇನೆ . ನಾನೂ ಸಹ ಎದುರುದಾರ ಸಂಸ್ಥೆಯಲ್ಲಿ ಅಧಿಕಾರಿ ನೌಕರ ಎಂದರೆ ಹೌದು . ಅರ್ಜಿದಾರನ ವಿರುದ್ಧ ಇಲಾಖಾ ವಿಚಾರಣೆಯಲ್ಲಿ ಸಂಸ್ಥೆಯ ಪರವಾಗಿ ಸಾಕ್ಷ್ಯ ನೀಡಿದ್ದಾರೆ . ಆ ರೀತಿ ಸಾಕ್ಷ್ಯ ನೀಡಿರುವುದರ ಪ್ರತಿಯನ್ನು ಅರ್ಜಿದಾರನಿಗೆ ಕೊಡಲಾಗಿದೆ . ಆ ರೀತಿ ಕೊಟ್ಟ ಬಗ್ಗೆ ವಿಚಾರಣಾ ನಡಾವಳಿಯಲ್ಲಿ ನಮೂದಿಸಿಕೊಳ್ಳಲಾಗಿದೆ . ಅರ್ಜಿದಾರನಿಗೆ ದೋಷಾರೋಪಣೆ ಬಗ್ಗೆ ಅವನ ವಿವರಣೆ ನೀಡಲು ಅವಕಾಶ ನೀಡಲಾಗಿದೆ . ದೋಷಾರೋಪಣೆಯನ್ನು ಅರ್ಜಿದಾರನಿಗೆ ನಾನು ಓದಿ ಹೇಳಿರುವುದಿಲ್ಲ ಆದರೆ ಅದನ್ನು ಅರ್ಜಿದಾರನಿಗೆ ಜಾರಿ ಮಾಡಲಾಗಿದೆ . ಅದನ್ನು ಜಾರಿ ಮಾಡಿರುವುದಾಗಿ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಿಚಾರಣೆ ಹಂತದಲ್ಲಿ ಅರ್ಜಿದಾರನಿಗೆ ವಿವರಣೆ ನೀಡಲು ಹೇಳಿಕೆ ನೀಡಲು ಅವಕಾಶ ನೀಡಿಲ್ಲ ಎಂದರೆ ಸರಿಯಲ್ಲ. ಸಿ ಆ್ಯಂಡ್ ಡಿ ನಿಯಮದ ಪ್ರಕಾರವಾಗಿ ವಿಚಾರಣೆ ಮಾಡಿಲ್ಲ ಎಂದರೆ ಸರಿಯಲ್ಲ. ನಾನು ಇಲಾಖೆಯಲ್ಲಿ ನೌಕರ ಆಗಿರುವುದರಿಂದ ಇಲಾಖೆಗೆ ಸಹಾಯ ಮಾಡುವುದಕ್ಕಾಗಿ ಸುಳ್ಳು ವರದಿ ನೀಡಿದ್ದೇನೆ ಎಂದರೆ ಸರಿಯಲ್ಲ. ನೈಸರ್ಗಿಕ ನ್ಯಾಯ ನಿಯಮದಂತೆ ಅರ್ಜಿದಾರನಿಗೆ ಅವಕಾಶ ನೀಡದೇ ಪಕ್ಷಪಾತ ಧೋರಣೆ ಮಾಡಿದ್ದೇನೆ ಎಂದರೆ ಸರಿಯಲ್ಲ. ಸಂಸ್ಥೆಗೆ ಸಹಾಯ ಮಾಡುವುದಕ್ಕಾಗಿ ನಾನು ಮತ್ತು ಸಂಸ್ಥೆಯವರು ಸೇರಿ ಸುಳ್ಳು ದಾಖಲೆ ತಯಾರು ಮಾಡಿದ್ದೇವೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ.